Sahitya Akademi Award-2024, Kannadaprabha, Dt.19.12.2024

# ಕೆ.ವಿ.ನಾರಾಯಣಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

## ನುಡಿಗಳ ಅಳಿವು ಕೃತಿಗೆ ಕೇಂದ್ರದ ಪ್ರಶಸ್ತಿ ಪ್ರಕಟ

**ನವದೆಹಲಿ:** 2024ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರ ಹೆಸರು ಪ್ರಕಟವಾಗಿದ್ದು, ಕನ್ನಡದ ಕೆ.ವಿ.ನಾರಾಯಣ



ಸೇರಿ 21 ಜನರಿಗೆ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಕೆ.ವಿ. ನಾರಾಯಣ ಅವರ 'ನುಡಿಗಳ ಅಳಿವು' ಕೃತಿಗೆ 'ಸಾಹಿತ್ಯ ವಿಮರ್ಶೆ ಅಡಿಯಲ್ಲಿ ಪ್ರಶಸ್ತಿ ಸಿಕ್ಕಿದೆ. ಇದೇ ವೇಳೆ, 21 ಭಾಷೆಗಳಿಗೆ ಪ್ರಶಸ್ತಿ ಪ್ರಕಟವಾಗಿದ್ದು, 8 ಕವಿತೆ, 3 ಕಾದಂಬರಿ, 3 ಪ್ರಬಂಧ, 3 ಸಾಹಿತ್ಯ ವಿಮರ್ಶೆ, 1 ನಾಟಕ ಮತ್ತು 1 ಸಂಶೋಧನೆ ಪುಸ್ತಕ ಪ್ರಶಸ್ತಿಗೆ ಆಯ್ಕೆಯಾಗಿದೆ.

ಬೆಂಗಾಲಿ, ಡೋಗ್ರಿ ಮತ್ತು ಉರ್ದು ಭಾಷೆಗಳ ಹೆಸರು ಮುಂದಿನ ದಿನಗಳಲ್ಲಿ ಪ್ರಕಟವಾಗಲಿದೆ ಎಂದು ಸಾಹಿತ್ಯ ಅಕಾಡೆಮಿ ಪ್ರಕಟಣೆ ತಿಳಿಸಿದೆ.

### ಐಡೆಂಟಿಟಿ ಸುಲಭ ಅಲ್ಲ

ಪ್ರತೀ ವರ್ಷ ಯಾರೋ ಒಬ್ಬರಿಗೆ ಬರಬೇಕು. ಈ ವರ್ಷ ನನಗೆ ಬಂದಿದೆ ಅಷ್ಟೇ. ಪ್ರತಿಯೊಬ್ಬರಿಗೂ ತಮ್ಮ ವಾಯ್ಸ್ ಅನ್ನು ಕಂಡುಕೊಳ್ಳಲು, ಐಡೆಂಟಿಟಿಯನ್ನು ಕಂಡುಕೊಳ್ಳಲು, ಸಮಾಜದಲ್ಲಿ ತಮ್ಮ ಸ್ಥಾನ ನಿರ್ಧರಿಸಲು ಎಲ್ಲಾ ಕಾಲದಲ್ಲಿ ಪ್ರಯತ್ನ ಪಡುತ್ತಲೇ ಇರುತ್ತಾರೆ. ಇಂದು ಬರೆಯುವವರು ಹೆಚ್ಚಾಗಿರುವ ಕಾರಣ ಅವರ ಐಡೆಂಟಿಟಿಗಳಲ್ಲಿ ಹೆಚ್ಚು ಸಂಘರ್ಷ ಕಾಣಿಸುತ್ತಿದೆ. ಐಡೆಂಟಿಟಿ ಕಂಡುಕೊಳ್ಳುವುದು ಈಗ ಸುಲಭ ಅಲ್ಲ.

- ಕೆ ವಿ ನಾರಾಯಣ ಸಾಹಿತಿ

ore-560 001. Printed at Jagati Publications Ltd., Sy.No.172,
ahalli Nelamangala Taluk, Bangalore Rural Dist., Pin-562 123.
or written permission is prohibited.

Bangalore
Vol.58, No. 350
RNI Reg.No.RN.17012/67